**ಓ ಎಸ್ ನಂಃ 62-2018** **ಪಿ ಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 27.08.2024 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ** 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಪಿ ಪಿ ಜೆ ವಕೀಲರಿಂದ

1 ನೇ ಪ್ರತಿವಾದಿಯು ನಮ್ಮ ತಮ್ಮನ ಮಗ. ನಾವು ಒಟ್ಟು ಇಬ್ಬರು ಸಹೋದರರು ಮತ್ತು 3 ಜನ ಸಹೋದರಿಯರು. ದಾವಾ ಆಸ್ತಿಗಳು ಭೂ ನ್ಯಾಯ ಮಂಡಳಿಯಿಂದ ಮಂಜೂರಾದಂತಹ ಆಸ್ತಿಗಳು ಎಂದರೆ ಸಾಕ್ಷಿಯು ತನ್ನ ತಂದೆ ಮತ್ತು ತಂದೆಯ ಅಣ್ಣತಮ್ಮಂದಿರ ಆಸ್ತಿಗಳು ಎಂದು ನುಡಿಯುತ್ತಾರೆ. ಅ ಶೆಡ್ಯೂಲ್ ನ 1 ರಿಂದ 3 ನೇ ಐಟಂ ಆಸ್ತಿಗಳು ನನ್ನ ದೊಡ್ಡಪ್ಪನ ಮಗನಾದ ಚನ್ನಬಸಪ್ಪ ಅಕ್ಕಿ ರವರ ಹೆಸರಿನಲ್ಲಿ ಮಂಜೂರಾದಂತಹ ಆಸ್ತಿಗಳು ಎಂದರೆ ಸರಿ. ಅ ಶೆಡ್ಯೂಲ್ ನ 1 ರಿಂದ 3 ನೇ ಐಟಂ ಆಸ್ತಿಗಳನ್ನು ನನ್ನ ದೊಡ್ಡಪ್ಪನ ಮಗನು ನನ್ನ ತಂದೆಯ ಪರವಾಗಿ ಬಿಟ್ಟುಕೊಟ್ಟನು ಎಂದರೆ ಸಾಕ್ಷಿಯು ತನ್ನ ತಂದೆ ಮತ್ತು ಇತರೆ ಕುಟುಂಬಸ್ಥರ ಮದ್ಯೆ ಆದಂತಹ ವಿಭಾಗದಲ್ಲಿ ಸದರಿ ಆಸ್ತಿಗಳನ್ನು ತನ್ನ ತಂದೆಗೆ ಬಿಟ್ಟುಕೊಟ್ಟರು ಎಂದು ನುಡಿಯುತ್ತಾರೆ. ವಿಭಾಗವು ಯಾವಾಗ ಆಗಿದೆ ಎಂದು ಗೊತ್ತಿಲ್ಲ. ಸದರಿ ಆಸ್ತಿಗಳನ್ನು ಬಿಟ್ಟುಕೊಟ್ಟ ನಂತರ ಕಂದಾಯ ದಾಖಲೆಗಳು ನನ್ನ ತಂದೆಯ ಹೆಸರಿಗೆ ಬಂದವು ಎಂದರೆ ಸರಿ. ಸದರಿ ಆಸ್ತಿಗಳನ್ನು ಬಿಟ್ಟುಕೊಟ್ಟ ದಿನಾಂಕದಿಂದ ನನ್ನ ತಂದೆ ತಾನು ಸಾಯುವವರೆಗೆ ವ್ಯವಸಾಯ ಮಾಡಿಕೊಂಡು ಬಂದಿದ್ದ ಎಂದರೆ ಸರಿ. ನನ್ನ ತಂದೆ ಮರಣ ಹೊಂದುವ ಪೂರ್ವದಲ್ಲಿ ನಾನು ಮತ್ತು ನನ್ನ ಸಹೋದರ ಪ್ರತ್ಯೇಕವಾಗಿ ವಾಸವಾಗಿದ್ದೆವು. ನಾನು ನನ್ನ ವಿವಾಹದ ನಂತರ ನನ್ನ ಹೆಂಡತಿಯ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯು ನನ್ನ ತಮ್ಮನ ಜೊತೆ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಯೋಗಕ್ಷೇಮವನ್ನು ನನ್ನ ತಮ್ಮ ಮಾಡಿದ್ದರು ಎಂದರೆ ಸರಿಯಲ್ಲ.

ನನ್ನ ತಂದೆಯು ನನ್ನ ತಮ್ಮನ ಮಗನ ಪರವಾಗಿ ಮೃತ್ಯು ಪತ್ರ ಬರೆದ ವಿಚಾರ ನನಗೆ ಗೊತ್ತಿಲ್ಲ. ಮೃತ್ಯು ಪತ್ರ ಬರೆದಿರುವ ವಿಚಾರ ನನ್ನ ತಂದೆ ಮರಣ ಹೊಂದಿದ 7 ತಿಂಗಳ ನಂತರ ನನ್ನ ತಮ್ಮ ಆಸ್ತಿಯಲ್ಲಿ ತನ್ನ ಮಗನ ಹೆಸರು ಇದೆ ಎಂದು ಹೇಳಿದಾಗ ಗೊತ್ತಾಯಿತು. ನನ್ನ ತಂದೆ ಮಾನಸಿಕವಾಗಿ ಅಸ್ವಸ್ಥರಾಗಿದ್ದರು ಎಂಬುದನ್ನು ತೋಸರಿಸಲು ದಾಖಲೆಗಳನ್ನು ಕೊಟ್ಟಿಲ್ಲ. 2 ನೇ ಪ್ರತಿವಾದಿಯು ನನ್ನ ತಂದೆಯ ಜೋಪಾನವನ್ನು ಮಾಡಿದ ಕಾರಣದಿಂದ 1 ನೇ ಪ್ರತಿವಾದಿಯ ಪರವಾಗಿ ಮೃತ್ಯು ಪತ್ರವನ್ನು ಬರೆದುಕೊಟ್ಟರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ನನ್ನ ತಂದೆಯನ್ನು ಜೋಪಾನ ಮಾಡಿಲ್ಲ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಆಗಿದ್ದರಿಂದ

ಮೃತ್ಯು ಪತ್ರವನ್ನು ಬರೆದರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇಲ್ಲ. ನನ್ನ ತಂದೆ 7 ವರ್ಷಗಳ ಹಿಂದೆ ಮರಣ ಹೊಂದಿದರು. 1 ನೇ ಪ್ರತಿವಾದಿಗೆ ಸೇರಿದ ದಾವಾ ಆಸ್ತಿಗಳನ್ನು ಕಬಳಿಸುವ ದುರುದ್ದೇಶದಿಂದ ನನ್ನ ಸಹೋದರಿಯರೊಂದಿಗೆ ಸೇರಿಕೊಂಡು ಸುಳ್ಳು ದಾವೆಯನ್ನು ಹೂಡಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪಾಲು ಕೋರಿ 2 ನೇ ಪ್ರತಿವಾದಿಗೆ ಕೇಳಿಲ್ಲ. ತನ್ನ ವ್ಯವಸಾಯಕ್ಕೆ 2 ನೇ ಪ್ರತಿವಾದಿಯು ತೊಂದರೆ ಮಾಡಿದ್ದರಿಂದ ಈ ದಾವೆಯನ್ನು ಹೂಡಿರುವುದಾಗಿ ನುಡಿಯುತ್ತಾರೆ. ತೊಂದರೆ ಮಾಡಿದ ದಿನಾಂಕ ಗೊತ್ತಿಲ್ಲ. ಪೊಲೀಸ ಠಾಣೆಯಲ್ಲಿ ದೂರು ದಾಖಲಿಸಿದ್ದೆ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ದಾವಾ ಆಸ್ತಿಯ ಪೂರ್ಣ ಕಬ್ಜೆಯಲ್ಲಿ 2 ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಾನು 2 ಎಕರೆ ಮತ್ತು 2 ನೇ ಪ್ರತಿವಾದಿ 2 ಎಕರೆ ಜಮೀನನ್ನು ಉಳುಮೆ ಮಾಡುತ್ತಿರುವುದಾಗಿ ನುಡಿಯುತ್ತಾರೆ. ನಾನು 2 ಎಕರೆ ಜಮೀನನ್ನು ಉಳುಮೆ ಮಾಡುತ್ತಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಕಬ್ಜೆಗೆ ನಾನು ತೊಂದರೆ ಕೊಟ್ಟಿದ್ದರಿಂದ ನನ್ನ ವಿರುದ್ಧ ಕ್ರೈಮ ನಂ.65/2023 ರಲ್ಲಿ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. 2019 ರಲ್ಲು ಸಹ ನಮ್ಮ ವಿರುದ್ದ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ.

ಬ ಶೇಡ್ಯೂಲನ 1 ರಿಂದ 4 ಐಟಂ ಆಸ್ತಿಗಳು ಮೂಲತಃ ನನ್ನ ತಂದೆಯ ಹೆಸರಿನಲ್ಲಿ ಇದ್ದವು ಎಂದರೆ ಸರಿ. ಬ ಶೇಡ್ಯೂಲನ 1 ನೇ ಐಟಂ ಆಸ್ತಿ ಮತ್ತು 3 ನೇ ಐಟಂ ಆಸ್ತಿ ಪೈಕಿ ಆಸ್ತಿ ಸಂಖ್ಯೆಃ 76 ಮೂಲತಃ ನನ್ನ ತಾಯಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ 2 ಆಸ್ತಿಗಳನ್ನು ನನ್ನ ತಾಯಿ ನನ್ನ ತಂದೆಯ ಪರವಾಗಿ ಬಿಟ್ಟುಕೊಟ್ಟಿದ್ದರು ಎಂದರೆ ಸರಿ. ಬ ಶೇಡ್ಯೂಲನ 2 ನೇ ಐಟಂ ಆಸ್ತಿ ಮತ್ತು 3 ನೇ ಐಟಂ ಆಸ್ತಿ ಪೈಕಿ ಆಸ್ತಿ ಸಂಖ್ಯೆಃ 77 ನನ್ನ ತಂದೆ ಖರೀದಿ ಮಾಡಿದಂತಹ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆ ಯಾರ ಹೆಸರಿಗೆ ಮೃತ್ಯು ಪತ್ರ ಬರೆದಿದ್ದಾರೆಂದು ಗೊತ್ತಿಲ್ಲ. ದಾವಾ ಆಸ್ತಿಗಳ ಮೇಲೆ ನನ್ನ ತಂದೆಗೆ ಸಂಪೂರ್ಣ ಅಧಿಕಾರ ಇದ್ದ ಕಾರಣ 1 ನೇ ಪ್ರತಿವಾದಿಯ ಪರವಾಗಿ ಮೃತ್ಯು ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನನಗೆ ನನ್ನ ತಂದೆ ಮೃತ್ಯು ಪತ್ರ ಬರೆದ ದಿನಾಂಕದಂದೆ ಹೇಳಿದ್ದರು ಎಂದರೆ ಸರಿಯಲ್ಲ. 3 ಮತ್ತು 6 ನೇ ಪ್ರತಿವಾದಿಗಳು 2 ನೇ ಪ್ರತಿವಾದಿಯ ಜೋಪಾನತದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ನುಡಿಯುತ್ತಾರೆ. 3 ಮತ್ತು 6 ನೇ ಪ್ರತಿವಾದಿಗಳು ಪ್ರತ್ಯೇಕವಾಗಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ

ಮೇಲೆ ನನಗೆ ಯಾವುದೇ ಹಕ್ಕು ಇಲ್ಲದೆ ಇದ್ದರು ಸಹ 2 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**